**ಪಾಠ–3** **ಜನವರಿ 9–15**

# ನಿನ್ನ ರಾಜ್ಯವು ಮುರಿದು ಬೀಳುತ್ತಿರುವಾಗ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 7:1–9, ಯೆಶಾಯ 7:10–13, ಯೆಶಾಯ 7:14.

**ಸ್ಮರಣವಾಕ್ಯ: "ನೀವು ನಂಬದೆ ಹೋದರೆ ನೀವೆಂದಿಗೂ ಸ್ಥಿರವಾಗಿ ನೆಲೆಗೊಳ್ಳುವುದಿಲ್ಲ"** (ಯೆಶಾಯ 7:9).

ಒಂದು ಸಬ್ಬತ್ತಿನ ದಿನದಲ್ಲಿ ಆರಾಧನೆ ಮುಗಿಸಿಕೊಂಡು ಕಾನಿ ಮತ್ತು ರಾಯ್ ತಮ್ಮ ವಾಹನದಲ್ಲಿ ಮನೆಯ ಕಡೆಗೆ ಹೊರಟರು. ಮನೆ ಸಮೀಪಿಸುತ್ತಿದ್ದಂತೆಯೇ ಅಂಗಳದಿಂದ ಗಾಬರಿಗೊಂಡ ಕೋಳಿಯೊಂದು ಅಡ್ಡಲಾಗಿ ಹಾರಿಕೊಂಡು ಹೋಯ್ತು. ಏನೋ ಎಡವಟ್ಟು ಆಗಿರುವಂತೆ ತೋರಿತು. ಪಂಜರದೊಳಗೆ ಭದ್ರವಾಗಿರಬೇಕಾಗಿದ್ದ ಕೋಳಿಗಳು ಹೊರಗೆ ಚೆಲ್ಲಾಪಿಲ್ಲಿಯಾಗಿ ಓಡಾಡುತ್ತಿದ್ದವು. ಏನಾಯ್ತು ಎಂದು ಗಾಬರಿಯಿಂದ ನೋಡಲಾಗಿ ವಿಷಯವು ತಿಳಿದುಬಂತು. ಅವರ ಪಕ್ಕದ ಮನೆಯ ನಾಯಿಯು ಅವರ ಅಂಗಳದಿಂದ ಹೊರಬಂದು ಡೈಸಿಯನ್ನು ಬಾಯಲ್ಲಿ ಕಚ್ಚಿಕೊಂಡು ನಿಂತಿತ್ತು. ಡೈಸಿಯು ಒಂದು ಸುಂದರವಾದ ಬಿಳಿ ಬಣ್ಣದ ಗರಿಗಳುಳ್ಳ ಮೊಟ್ಟೆಯಿಡುವ ಕೋಳಿ. ಕಾನಿಯು ಅದರ ಬಾಯಿಂದ ತನ್ನ ಮುದ್ದಿನ ಕೋಳಿಯನ್ನು ಬಿಡಿಸಿದಳು. ಆದರೆ ಅದರ ಕತ್ತು ನಜ್ಜುಗುಜ್ಜಾಗಿತ್ತು

* ಈ ಪಾಠವನ್ನು ಜನವರಿ 16ರ ಸಬ್ಬತ್ತಿನ ಸಿದ್ಧತೆಗಾಗಿ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಸ್ವಲ್ಪ ಹೊತ್ತಿನಲ್ಲಿಯೇ ಆಕೆಯ ಮಡಿಲಿನಲ್ಲಿ ಡೈಸಿಯು ಸತ್ತುಹೋಯ್ತು. ಸತ್ತುಹೋದ ತನ್ನ ಕೋಳಿಯನ್ನು ಕೈಯಲ್ಲಿ ಹಿಡಿದುಕೊಂಡು ರೋದಿಸಿದಳು.

ಕಾನಿಯ ಮುದ್ದಿನ ಇನ್ನೊಂದು ಉದ್ದನೆಯ ಬಾತುಕೋಳಿಯು ಸಹಾ ಬಹಳವಾಗಿ ಗಾಸಿಗೊಂಡಿತ್ತು. ಡೈಸಿಯನ್ನು (ಕೋಳಿ) ಈಕೆಯೆ ಹೊಡೆದು ಸಾಯಿಸಿದ್ದಾಳೆಂದು ಬಾತುಕೋಳಿಯು ಭಾವಿಸಿಕೊಂಡಂತೆ ಕಾಣಿಸುತ್ತಿತ್ತು. ಅದು ಕಾನಿಯನ್ನು ಕಂಡಾಗಲೆಲ್ಲಾ ತನ್ನ ಗಟ್ಟಿಯಾದ ಕೊಕ್ಕಿನಿಂದ ಅವಳನ್ನು ನೋವಾಗುವಂತೆ ಕುಕ್ಕುತ್ತಿತ್ತು.

ಕೆಲವು ಸಲ ನಮ್ಮ ಸ್ನೇಹಿತರು ಯಾರು ವೈರಿಗಳು ಯಾರು ಎಂದು ವಿಂಗಡಿಸಿ ಹೇಳುವುದು ಬಹಳ ಕಷ್ಟ. ಈ ವಾರದ ಪಾಠದಲ್ಲಿ ಯುದಾಯದ ಅರಸನೂ ಇದೇ ತರದ ಸಮಸ್ಯೆ ಹೊಂದಿದ್ದುದನ್ನು ನೋಡುತ್ತೇವೆ. ಅವನು ಯಾಕೆ ತಪ್ಪಾದ ಆಯ್ಕೆಗಳನ್ನು ಮಾಡಿಕೊಂಡನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡೋಣ.

**ಭಾನುವಾರ** **ಜನವರಿ 10**

## ಉತ್ತರ ದಿಕ್ಕಿನಿಂದ ಬಂದ ಅಪಾಯ (ಯೆಶಾಯ 7:1–9)

ಅರಸನಾದ ಅಹಾಜನು ತನ್ನ ಆಳ್ವಿಕೆಯ ಆರಂಭದಲ್ಲಿ ಯಾವ ತೆರನಾದ ಭಯಂಕರವಾದ ಬಿಕ್ಕಟ್ಟನ್ನು ಎದುರಿಸಿದನು? (2 ಅರಸುಗಳು 15:37,38 ಮತ್ತು 16:5,6, ಯೆಶಾಯ 7:1,2).

ಉತ್ತರದ ರಾಜ್ಯಗಳಾದ ಇಸ್ರಾಯೇಲು (ಎಫ್ರಾಯಿಮ್) ಮತ್ತು ಸಿರಿಯ (ಆರಾಮ್) ದೇಶಗಳು ಒಟ್ಟಾಗಿ ಸೇರಿಕೊಂಡು ದಕ್ಷಿಣದ ಸಣ್ಣರಾಜ್ಯವಾದ ಯೆಹೂದದ ವಿರುದ್ಧವಾಗಿ ನಿಂತವು. ಎದೋಮ್ಯರು ಮತ್ತು ಫಿಲಿಷ್ಟಿಯರು ಯೂದಾಯದ ಮೇಲೆ ಆಕ್ರಮಣ ಮಾಡಿ ಅದನ್ನು ದುರ್ಬಲಗೊಳಿಸಿದ್ದರು. ಇದಕ್ಕೂ ಮೊದಲು ಯೂದಾಯವು ಇಸ್ರಾಯೇಲಿನ ವಿರುದ್ಧ ಹೋರಾಡಿತ್ತು. ಆದರೆ ಇಸ್ರಾಯೇಲು ಮತ್ತು ಸಿರಿಯಾ ರಾಜ್ಯಗಳ ಮೈತ್ರಿಯು ಯುದಾಯದ ಮೇಲೆ ಮಿತಿಮೀರಿದ ಅಪಾಯವನ್ನು ತಂದಿತ್ತು. ಈ ಎರಡೂ ರಾಜ್ಯಗಳು ಯೂದಾಯವನ್ನು ತಮ್ಮೊಂದಿಗೆ ಸೇರಿಸಿಕೊಂಡು ದೊಡ್ಡ ಬಲವಾದ ಅಶ್ಶೂರದ

ರಾಜ ಪೂಲನ ವಿರುದ್ಧ ಹೋರಾಡುವ ಉದ್ದೇಶವನ್ನು ಹೊಂದಿದ್ದವು ಎಂಬುದಾಗಿ ತೋರುತ್ತದೆ (2 ಅರಸುಗಳು 15:19). ಯಾಕೆಂದರೆ ಪೂಲನು ತನ್ನ ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಮುಂದುವರಿಸಿದ ಆಕ್ರಮಣಗಳು ಇವರುಗಳಲ್ಲಿ ಭೀತಿಯನ್ನು ಉಂಟುಮಾಡಿದ್ದವು. ಇಸ್ರಾಯೇಲು ಮತ್ತು ಸಿರಿಯಾ ರಾಜ್ಯಗಳು ಪರಸ್ಪರ ತಮ್ಮಲ್ಲಿದ್ದ ದೀರ್ಘವಾದ ಹಗೆತನವನ್ನು ಬದಿಗೆ ಇರಿಸಿ ದೊಡ್ಡ ಅಪಾಯದ ವಿರುದ್ಧ ಹೋರಾಡಬೇಕಾಗಿದ್ದಿತು. ಅವು ಯಹೂದವನ್ನು ಗೆದ್ದುಕೊಂಡರೆ ತಮಗೆ ಕೈಗೊಂಬೆಯಾದ ರಾಜನೊಬ್ಬನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಆ ರಾಜ್ಯದ ಸಂಪನ್ಮೂಲಗಳನ್ನು ಮತ್ತು ಜನಬಲವನ್ನು ಬಳಸಿಕೊಳ್ಳಬಹುದಾಗಿತ್ತು (ಯೆಶಾಯ 7:5,6).

ತನ್ನ ರಾಜ್ಯಕ್ಕೆ ಅಪಾಯ ಒದಗಿದಾಗ್ಯೂ ಅಹಾಜನು ಕಂಡುಕೊಂಡ ಪರಿಹಾರವೇನು? (2 ಅರಸುಗಳು 16:7–9 ಮತ್ತು 2 ಪೂ.ವೃ.28:16).

ತನ್ನನ್ನೂ ತನ್ನ ರಾಜ್ಯವನ್ನೂ ಅಪಾಯದಿಂದ ಪಾರು ಮಾಡುವಂತಹ ಸ್ನೇಹಿತನು ದೇವರು ಎಂದು ಮನಗಾಣದೆ ಅಹಾಜನು ತನ್ನ ಶತ್ರುಗಳ ಶತ್ರುವಾದ ಅಶ್ಶೂರದ ರಾಜ ಪೂಲನ ಸ್ನೇಹವನ್ನು ಬಯಸಿದನು. ಸಿರಿಯ ಮತ್ತು ಇಸ್ರಾಯೇಲಿನ ವಿರುದ್ಧ ನಿಲ್ಲುವುದಕ್ಕೆ ಪೂಲನು ಅಹಾಜನ ಮನವಿಯನ್ನು ಸಂತೋಷದಿಂದ ಒಪ್ಪಿಕೊಂಡನು. ಅದಕ್ಕಾಗಿ ಪೂಲನು ಹೇರಳವಾದ ಕಪ್ಪಕಾಣಿಕೆಗಳನ್ನು ಪಡೆದನು ಮತ್ತು ಸಿರಿಯವನ್ನು ಕೆಣಕಲು ಒಂದು ಕಾರಣವೂ ಸಿಕ್ಕಿತು (2 ಅರಸುಗಳು 16:9). ಇಸ್ರಾಯೇಲುಮತ್ತು ಸಿರಿಯಾದ ಮೈತ್ರಿಯ ಬಲವು ಮುರಿಯಿತು. ಸದ್ಯಕ್ಕೆ ಅಹಾಜನು ಯಹೂದವನ್ನು ಅಪಾಯದಿಂದ ಪಾರು ಮಾಡಿದನೆಂದು ತೋರುತ್ತಿತ್ತು.

ಅಹಾಜನು ಮಾಡಿದ ಈ ಏರ್ಪಾಟು ನಮಗೆ ಆಶ್ಚರ್ಯವನ್ನುಂಟು ಮಾಡಬಾರದು. ಅದುವರೆಗೆ ಯೂದಾಯವನ್ನು ಆಳಿದ ಎಲ್ಲಾ ರಾಜರುಗಳಲ್ಲಿ ಅಹಾಜನು ಬಹಳ ಮೋಸಕರವಾದ ರಾಜನಾಗಿದ್ದನು (2 ಅರಸುಗಳು 16:3,4) ಮತ್ತು 2 ಪೂ.ವೃ. 28:2–4ನ್ನು ನೋಡಿರಿ).

ಅಹಾಜನು ಎಂಥವನಾಗಿದ್ದನು ಮತ್ತು ಅಪಾಯ ಸಂದರ್ಭದಲ್ಲಿ ಯಾಕೆ

ಹಾಗೆ ನಡೆದುಕೊಂಡನು ಎಂಬುದು ಆತನ ಬಗ್ಗೆ ಓದಿದ ಮೇಲೆ ನಮಗೆ ಅರ್ಥವಾಗುತ್ತದೆ. ವೈಯಕ್ತಿಕವಾಗಿ ನಮಗೆ ಯಾವ ಪಾಠವು ಇದರಲ್ಲಿದೆ? ಈವಾಗ ನಾವು ದೇವರನ್ನು ನಂಬಿಕೊಂಡು ವಿಧೇಯರಾಗದೆ ನಿಜವಾಗಿ ಕಷ್ಟಗಳು ಬಂದಾಗ ಆತನ ಮೇಲೆ ಭರವಸವಿಡುವ ವಿಶ್ವಾಸವು ನಮ್ಮಲ್ಲಿ ಬರುತ್ತದೆ ಎಂದು ಆಲೋಚಿಸುವಂತೆ ಮಾಡುವಂಥದ್ದು ಯಾವುದು? (ಯಾಕೋಬ 2:22, ಯೆರೆ 12:5).

**ಸೋಮವಾರ** **ಜನವರಿ 11**

## ಅಡ್ಡಗಟ್ಟುವ ಪ್ರಯತ್ನ

ಅಹಾಜನು ಇಸ್ರಾಯೇಲ್ ಮತ್ತು ಸಿರಿಯಾ ರಾಜ್ಯಗಳಿಂದ ಬಂದ ಬೆದರಿಕೆಯನ್ನು ನಿವಾರಿಸಿಕೊಳ್ಳಲು ಅಗತ್ಯವಾದ ರಾಜಕೀಯ ನಡೆಯನ್ನು ಆಲೋಚನೆ ಮಾಡುತ್ತಿರುವಾಗ ಆತನಿಗೆ ಅರಿಯದ ವಿಷಯಗಳು ದೇವರಿಗೆ ತಿಳಿದಿತ್ತು. ಅಹಾಜನು ಬುದ್ಧಿ ಕಲಿಯುವಂತೆ ಮತ್ತು ಅವನನ್ನು ಶಿಸ್ತಿಗೆ ಒಳಪಡಿಸಲು ದೇವರು ಈ ಸಮಸ್ಯೆಯನ್ನು ಆತನಿಗೆ ಬರಮಾಡಿದ್ದನು (2 ಪೂ.ವೃ. 28:5,19). ಇದಲ್ಲದೆ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅಶ್ಶೂರ ರಾಜನಾದ ಪೂಲನ ಸಹಾಯವನ್ನು ಯಾಚಿಸುದುದು ಮಾನವ ಬುದ್ಧಿಗೆ ಸರಿಯೆಂದು ಕಂಡರೂ ಇದರಿಂದ ಯೂದಾಯವು ಅನ್ಯರ ಆಡಳಿತಕ್ಕೆ ಒಳಗಾಗಿ ಎಂದೆಂದಿಗೂ ಚೇತರಿಸಿಕೊಳ್ಳಲಾರದ ಪರಿಸ್ಥಿತಿಯುಂಟಾಗುತ್ತದೆಯೆಂದು ದೇವರಿಗೆ ತಿಳಿದಿತ್ತು.

ಅಪಾಯವು ದಿಗಿಲುಪಡಿಸುವಷ್ಟು ಹೆಚ್ಚಾಗಿತ್ತು. ಆದುದರಿಂದ ದೇವರು ಇದನ್ನು ತಡೆಯುವಂತೆ ಯೆಶಾಯನನ್ನು, ಅಹಾಜನು ಅಶ್ಶೂರ ರಾಜನ ಹತ್ತಿರಕ್ಕೆ ಹೋಗದಂತೆ ತಡೆಯಲು ಕಳುಹಿಸಿದನು (ಯೆರೂಸಲೇಮನ್ನು ಮುತ್ತಿಗೆ ಹಾಕಿದಾಗ ಅದಕ್ಕೆ ಬೇಕಾದ ನೀರು ಸರಬರಾಜನ್ನು ಪರಿವೀಕ್ಷಣೆ ಮಾಡುವವನಂತೆ) ಯಾಶೂಬನನ್ನು ಜೊತೆಗೆ ಕರೆದುಕೊಂಡು ಹೋಗೆಂದು ಯಾಕೆ ಹೇಳಿದನು? (ಯೆಶಾಯ 7:3).

ಯೆಶಾಯನು ಅರಸನಾದ ಅಹಾಜನ ಬಳಿಗೆ ಹೋಗಿ ತನ್ನ ಮಗನನ್ನು

"ಉಳಿದವನು ತಿರುಗಿಬರುವನು" ಎಂಬುದಾಗಿ ಪರಿಚಯಿಸಿದಾಗ ಅರಸನು ಗಲಿಬಿಲಿಗೊಂಡನು. ಉಳಿದವನು– ಯಾರಿಂದ ಉಳಿದವನು? ತಿರುಗಿ ಬರುವನು – ಯಾವುದರಿಂದ ತಿರುಗಿ ಬರುವನು? ಯಾಕೆಂದರೆ ಆ ಹುಡುಗನ ತಂದೆ ಪ್ರವಾದಿಯಾಗಿದ್ದ ಕಾರಣ ಆ ಹುಡುಗನ ಹೆಸರು ಅಹಾಜನಿಗೆ ಅಶುಭವಾದ ಸಂದೇಶದಂತೆ ಕಂಡಿತು. ಇದು ಜನರು ಸೆರೆಯಾಗಿ ಹೋಗುತ್ತಾರೆಯೇ? ಅಥವಾ ತಮ್ಮ ತಪ್ಪಿಗೆ ಪಶ್ಚಾತ್ತಾಪ ಪಡುತ್ತಾರೆಯೆ ಅಂದರೆ ದೇವರ ಹತ್ತಿರ ಬರುತ್ತಾರೆಯೆ?

ನಿನ್ನ ಪಾಪಗಳಿಂದ ಹಿಂದಿರುಗು ಇಲ್ಲವೆ ಸೆರೆಯಾಗಿ ಹೋಗು. ಯಾವುದು ಸರಿಯಾದದೋ ಅದನ್ನು ಮಾಡಿದರೆ ಅದು ನಿನ್ನನ್ನು ಉಳಿಸುವುದು! ಎಂಬುದು ಅಹಾಜನಿಗೆ ದೇವರು ಕೊಟ್ಟ ಸಂದೇಶವಾಗಿತ್ತು.

ದೇವರ ಸಂದೇಶವು ಅರಸನ ಪರಿಸ್ಥಿತಿಯನ್ನು ಹೇಗೆ ಎತ್ತಿ ತೋರಿಸುತ್ತಿದೆ? (ಯೆಶಾಯ 7:4–9).

ಸಿರಿಯ ಮತ್ತು ಇಸ್ರಾಯೇಲ್ ರಾಜ್ಯಗಳಿಂದ ಬಂದ ಬೆದರಿಕೆಯು ಅಳಿದು ಯಹೂದವು ಉಳಿಯುತ್ತಿತ್ತು. ದೊಡ್ಡ ಜ್ವಾಲಾಮುಖಿಯಂತೆ ಅಹಾಜನಿಗೆ ಕಂಡ ಸೇನಾಬಲಗಳು ದೇವರ ದೃಷ್ಟಿಯಲ್ಲಿ ಕೇವಲ ಹೊಗೆಯಾಡುವ ಎರಡು ಮೋಟುಕೊಳ್ಳಿಗಳಾಗಿದ್ದವು (ಯೆಶಾಯ 7:4). ಹಾಗಾಗಿ ಅಹಾಜನ ಅಶ್ಯೂರ ಅರಸನ ಸಹಾಯಕ್ಕಾಗಿ ಮೊರೆಹೋಗುವ ಅಗತ್ಯವಿರಲಿಲ್ಲ.

ಆದರೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿ ಅಹಾಜನು ದೇವರ ಮೇಲೆ ಮತ್ತು ಆತನ ವಾಗ್ದಾನಗಳ ಮೇಲೆ ಭರವಸೆ ಇಡಬೇಕಾಗಿತ್ತು. ತಾನು ನೆಲೆಗೊಳ್ಳಲು (ಸ್ಥಿರವಾಗಿ ನಿಲ್ಲಲು) ಅಹಾಜನು ದೇವರನ್ನು ನಂಬಬೇಕಾಗಿದ್ದಿತು (ಯೆಶಾಯ 7:9). ನಂಬು ಮತ್ತು ನೆಲೆಗೊಳ್ಳು ಎಂಬ ಎರಡು ಪದಗಳು ಇಬ್ರಿಯ ಭಾಷೆಯಲ್ಲಿ ಸತ್ಯ (ನಂಬಲರ್ಹವಾದದ್ದು) ಎಂಬುದಕ್ಕಿರುವ ಪದವೇ ಮೂಲವಾಗಿದೆ. ಆ ಮೂಲಪದವು ಯಾವುದು ಸತ್ಯವೋ ನಂಬಲರ್ಹವೋ ಅದನ್ನು ದೃಢಪಡಿಸುವಂಥದ್ದು ಎಂಬ ಅರ್ಥಕೊಡುತ್ತದೆ.

ಅಹಾಜನು ಭರವಸೆ ಇಡಬಹುದಾದ ವ್ಯಕ್ತಿಯಾಗಬೇಕಿದ್ದರೆ ದೇವರ ಮೇಲೆ ಭರವಸೆ ಇಡಬೇಕಾಗಿತ್ತು ಮತ್ತು ವಿಶ್ವಾಸಾರ್ಹ ವ್ಯಕ್ತಿಯಾಗಬೇಕಿದ್ದರೆ ದೇವರ ಮೇಲೆ ವಿಶ್ವಾಸವಿಡಬೇಕಾಗಿತ್ತು.

ಯೆಶಾಯ 7:9ನೇ ವಚನದ ಕಡೆಯ ಭಾಗವನ್ನು ನೋಡಿರಿ. ವಿಶ್ವಾಸ ಮತ್ತು ನಂಬಿಕೆ ನಾವು ನೆಲೆಗೊಳ್ಳುವುದಕ್ಕೆ ಬಹಳ ಮುಖ್ಯವಾಗಿದೆ ಯಾಕೆ? ಯಾವುದರಲ್ಲಿ ನೆಲೆಗೊಳ್ಳಬೇಕು? ಈ ನಿಯಮವನ್ನು ಕ್ರೈಸ್ತೀಯ ಜೀವನಕ್ಕೆ ಹೇಗೆ ಅನ್ವಯ ಮಾಡಿಕೊಳ್ಳಬೇಕು?

**ಮಂಗಳವಾರ** **ಜನವರಿ 12**

## ಮತ್ತೊಂದು ಅವಕಾಶ (ಯೆಶಾಯ 7:10–13)

ಅರಸನಾದ ಅಹಾಜನು ಯೆಶಾಯನ ನಂಬಿಕೆಯ ಕರೆಗೆ ಸ್ಪಂದಿಸದೆ ಹೋದಾಗ ದೇವರು ರಾಜನಿಗೆ ಕರುಣೆಯುಳ್ಳವನಾಗಿ ಮತ್ತೊಂದು ಅವಕಾಶವನ್ನು ಕೊಟ್ಟನು, ಕೆಳಗೆ ಪಾತಾಳದಷ್ಟು ಆಳದಲ್ಲಿದ್ದರೂ ಮೇಲೆ ಮೇಲಣ ಲೋಕದಷ್ಟು ಎತ್ತರದಲ್ಲಿದ್ದರೂ ಯಾವುದಾದರೂ ಗುರುತನ್ನು ಕೇಳಿಕೊಳ್ಳಲು ಹೇಳಿದನು (ಯೆಶಾಯ 7:11). ನರಕುಲದವರಿಗೆ ಎಂದೆಂದಿಗೂ ದೊಡ್ಡ ಆಹ್ವಾನ ಸಿಕ್ಕಿತು. ವ್ಯಾಪಾರಗಾರರು ತಮ್ಮ ವಸ್ತುವನ್ನು ಮಾರಾಟ ಮಾಡುವಾಗ ಗ್ರಾಹಕರನ್ನು ಆಕರ್ಷಿಸಲು ಲಾಟರಿ ಅಥವಾ ಇತರೆ ಅದೃಷ್ಟದ ಆಟಗಳಲ್ಲಿ ಆಮಿಷವಾಗಿ "ಖರೀದಿಸಿರಿ ಬಹುಮಾನ ಗೆಲ್ಲಿರಿ" ಎಂಬುದಾಗಿ ದೊಡ್ಡ ಅಕ್ಷರಗಳಲ್ಲಿ ಜಾಹಿರಾತು ಕೊಟ್ಟು ಅವನ್ನು ಗೆಲ್ಲುವ ಅವಕಾಶ ಕೆಲವರಿಗೆ ಮಾತ್ರ ಸಾಧ್ಯವಾಗುವಂತೆ ನಿರ್ಬಂಧಗಳನ್ನು ಬಹಳ ಸಣ್ಣ ಅಕ್ಷರಗಳಲ್ಲಿ ಮುದ್ರಿಸಿರುತ್ತಾರೆ. ದೇವರು ಅಹಾಜನಿಗೆ ಅಂತಹ ಹುಸಿ ಆಮಿಷವನ್ನು ಒಡ್ಡಲಿಲ್ಲ. ಇಲ್ಲವೆ ಅತಿ ಹೆಚ್ಚು ಉದಾರಿಯಾದ ರಾಜನು ತನ್ನ ಅರ್ಧರಾಜ್ಯವನ್ನು ಮಾತ್ರ ದಾನ ಮಾಡಲು ಸಿದ್ಧವಾಗಿರುವಂತೆ ದೇವರು ಅಹಾಜನಿಗೆ ಮಾಡಲಿಲ್ಲ (ಎಸ್ತೆರಳು 5:6 ಮತ್ತು 7:2 ಮತ್ತು ಮತ್ತಾಯ 6:23ನ್ನು ನೋಡಿರಿ). ಆತನು ಇಡೀ ಪರಲೋಕ ಭೂಲೋಕವನ್ನೇ ಬರಿದು ಮಾಡಿ ಆತನಿಗೆ ಕೊಡಲು ಇಷ್ಟವುಳ್ಳವನಾಗಿ ಸಿದ್ಧವಾಗಿದ್ದನು. ಅದಕ್ಕೆ ಪ್ರತಿಯಾಗಿ ಅಹಾಜನು ಅದನ್ನು ನಂಬಬೇಕಾಗಿತ್ತು

ಅಷ್ಟೆ! ಅಹಾಜನು ಗುರುತಾಗಿ ಒಂದು ಚಿನ್ನದ ಪರ್ವತವನ್ನು ಅಥವಾ ಮೆಡಿಟರೇನಿಯನ್ ಸಮುದ್ರ ತೀರದಲ್ಲಿರುವ ಮರಳಿನಷ್ಟು ಸಂಖ್ಯೆಯ ಸೈನಿಕರನ್ನು ಕೇಳಿಕೊಳ್ಳಬಹುದಾಗಿತ್ತು.

ಯಾಕೆ ಅಹಾಜನು ಆ ರೀತಿಯಾಗಿ ನಡೆದುಕೊಂಡನು?

ಮೊದಲ ನೋಟಕ್ಕೆ ಅಹಾಜನು ದೇವರಿಗೆ ಭಯಭಕ್ತಿಯಿಂದ, ಗೌರವದಿಂದ ನಡೆದುಕೊಂಡಂತೆ ಅನ್ನಿಸುತ್ತದೆ. ಇಸ್ರಾಯೇಲ್ಯರು ಅರಣ್ಯದಲ್ಲಿ ಅಲೆಯುತ್ತಿರುವಾಗ ಅವರು ದೇವರನ್ನು ಪರೀಕ್ಷಿಸಿದಂತೆ ತಾನು ಪರೀಕ್ಷಿಸಬಾರದೆಂದು ಅಹಾಜನು ನಿರ್ಧರಿಸಿದನು (ವಿ.ಕಾಂಡ 17:2, ಧ.ಕಾಂಡ 6:16). ಆದರೆ, ಇಲ್ಲಿ ವ್ಯತ್ಯಾಸವೇನೆಂದರೆ ದೇವರೆ ತನ್ನನ್ನು ಪರೀಕ್ಷಿಸಲು ಅಹಾಜನಿಗೆ ಆಹ್ವಾನ ನೀಡುತ್ತಿದ್ದಾನೆ (ಮಲಾಕಿ 3:10ರ ಜೊತೆ ಇದನ್ನು ಹೋಲಿಸಿರಿ). ತನಗೆ ನೀಡುವ ಉದಾರವಾದ ಉಡುಗೊರೆಯನ್ನು ಅಹಾಜನು ಸ್ವೀಕರಿಸಿದ್ದರೆ ದೇವರ ಮೆಚ್ಚಿಕೆಗೆ ಪಾತ್ರನಾಗುತ್ತಿದ್ದನು. ಆದರೆ ದೇವರ ಮೇಲೆ ನಂಬಿಕೆ ಇಡಲು ತನಗೆ ಸಹಾಯ ಮಾಡುವುದಕ್ಕೂ ಸಹಾ ಅಹಾಜನು ಅವಕಾಶಕೊಡಲಿಲ್ಲ. ಆತನು ತನ್ನ ಹೃದಯಕ್ಕೆ ಯಾವುದೇ ಪ್ರವೇಶವನ್ನು ನಿಷೇಧಿಸಿ ಅದರ ಬಾಗಿಲನ್ನು ಮುಚ್ಚಿ ಅಗುಳಿಯನ್ನು ಹಾಕಿ ನಂಬಿಕೆಯನ್ನು ಹೊರಗಡೆ ಇಟ್ಟನು.

ಯೆಶಾಯ 7:13ನ್ನು ಓದಿರಿ. ಇಲ್ಲಿ ಯೆಶಾಯನು ಏನು ಹೇಳುತ್ತಿದ್ದಾನೆ? ಅಹಾಜನು ದೇವರಿಗೆ ಬೇಸರ ಪಡಿಸಬಾರದೆಂದು ಆತನನ್ನು ಪರೀಕ್ಷಿಸಲು ನಿರಾಕರಿಸಿದನು. ಆದರೆ ಆತನ ನಿರಾಕರಣೆಯಿಂದಲೇ ದೇವರಿಗೆ ಬೇಸರವಾಯಿತು. ಈ ವಚನದಲ್ಲಿ ಮನಸ್ಸನ್ನು ಅತಿಯಾಗಿ ಬೇಸರಪಡಿಸುವ ಅಂಶವೇನೆಂದರೆ ಯೆಶಾಯನು 'ನನ್ನ ದೇವರು' ಎಂಬುದಕ್ಕೆ ವ್ಯತಿರಿಕ್ತವಾದ ಪದವನ್ನು ಯೆಶಾಯ 7:11ರಲ್ಲಿ ಸೂಚಿಸಿದ್ದಾನೆ. ಇಲ್ಲಿ ಪ್ರವಾದಿಯು ರಾಜನನ್ನು ಕುರಿತು 'ನಿನ್ನ ದೇವರನ್ನು' ಒಂದು ಗುರುತು ಕೇಳು ಎಂದು ಹೇಳುತ್ತಾನೆ. ಅಹಾಜನು ದೇವರು ಕೊಟ್ಟ ಅವಕಾಶವನ್ನು ತಿರಸ್ಕರಿಸಿದಾಗ ದೇವರನ್ನು ತನ್ನ ದೇವರಾಗಿರುವುದಕ್ಕೆ ನಿರಾಕರಿಸಿದನು. ಕರ್ತನು ಯೆಶಾಯನ ದೇವರಾಗಿದ್ದನು. ಆದರೆ ಅಹಾಜನ ದೇವರಾಗಲಿಲ್ಲ.

ಎಲ್ಲರನ್ನೂ ರಕ್ಷಣೆಗೆ ತರಬೇಕೆನ್ನುವ ದೇವರ ಇಚ್ಛೆ ಮತ್ತು ದೀರ್ಘ ಶಾಂತಿಯ ಬಗ್ಗೆ ಈ ದಿನದ ಅಧ್ಯಯನವು ನಮಗೆ ಏನು ಬೋಧಿಸುತ್ತದೆ. ತನ್ನ ಪೂರ್ಣವಾಗಿ ದೇವರಿಗೆ ಒಪ್ಪಿಸದಿರುವ ಮಾನವ ಹೃದಯದ ಕಠುಡುತನ ಮತ್ತು ಕಠಿಣತೆಯ ಬಗ್ಗೆಯೂ ಸಹಾ ಈ ಅಧ್ಯಯನ ಏನು ಹೇಳುತ್ತದೆ?

ಕೊನೆಯಲ್ಲಿ, ಒಂದೊಮ್ಮೆ ದೇವರು ಅಹಾಜನಿಗೆ ಬೇಕಾದ ಗುರುತನ್ನು ಕೊಟ್ಟಿದ್ದರೆ ಆತನು ನಂಬುತ್ತಿದ್ದನು ಎಂದು ಆಲೋಚಿಸುವಿರಾ? ನಿಮ್ಮ ಉತ್ತರವನ್ನು ವಿವರಿಸಿ.

**ಬುಧವಾರ** **ಜನವರಿ 13**

## ಪುತ್ರನ ಗುರುತು (ಯೆಶಾಯ 7:14)

ಪಾತಾಳದಷ್ಟು ಆಳದ ಮತ್ತು ಮೇಲಣ ಲೋಕದಷ್ಟು ಮೇಲಿರುವಂತಹ ಗುರುತನ್ನು ಕೇಳುವ ಅವಕಾಶವು ಅಹಾಜನ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ಆದುದರಿಂದ ದೇವರು ತಾನಾಗಿಯೇ ಒಂದು ಗುರುತನ್ನು ಕೊಡುವುದಕ್ಕೆ ಬಂದಾಗ (ಯೆಶಾಯ 7:14). ನಾವು ನಮ್ಮ ಉಸಿರನ್ನು ಬಿಗಿಹಿಡಿಯುವಷ್ಟು ದೊಡ್ಡ ಪ್ರಮಾಣದ ದೇವರಜ್ಞಾನವು ಮಾತ್ರ ಯೋಜಿಸಬಹುದಾದ ಅತಿಶಯವಾದ ಗುರುತನ್ನು ನಿರೀಕ್ಷಿಸಬಹುದು (ಯೆಶಾಯ 55:9, 1 ಕೊರಿಂಥ 2:9ನ್ನು ಹೋಲಿಸಿರಿ).

ಪರಮಾಶ್ಚರ್ಯ! ಒಂದು ಮಗುವಿನ ಗುರುತು. ಆದರೆ ಒಬ್ಬ ಕನ್ಯೆಯು ಬಸುರಾಗಿ ಗಂಡುಮಗುವನ್ನು ಹಡೆದು ಅದಕ್ಕೆ ಇಮ್ಮಾನುವೇಲ್ ಎಂದು ಹೆಸರಿಡುವುದು ಪರಿಶುದ್ಧ ಗ್ರಂಥವು ಉಲ್ಲೇಖಿಸುವಷ್ಟು ಮಹತ್ತಾದ ಗುರುತೇನು?

ಆ ಸ್ತ್ರೀಯು ಯಾರು ಮತ್ತು ಅವಳ ಮಗುವು ಯಾವುದು?

ಗಿದ್ಯೋನನ ವಿಷಯದಲ್ಲಿ ಅವನು ಕೇಳಿಕೊಂಡ ಗುರುತು ನೆರವೇರಿದ್ದನ್ನು ನೋಡುತ್ತೇವೆ (ನ್ಯಾಯ 6:36–40). ಆದರೆ ಅಹಾಜನಿಗೆ ಕೊಟ್ಟ ಮಗನ ಗುರುತು ಹಳೆಯ ಒಡಂಬಡಿಕೆಯಲ್ಲಿ ನೆರವೇರಿವುದನ್ನು ಅದು ಎಲ್ಲೂ ತೋರಿಸಿಕೊಟ್ಟಿಲ್ಲ. ಈ ಗುರುತಿಗೆ ಸಂಬಂಧವಾಗಿ ಕೆಲವು ಸಾಧ್ಯವಿರುವ ನೆರವೇರಿಕೆಗಳು ಕೆಳಕಂಡಂತಿವೆ.

1) ಕನ್ನಿಕೆ ಎಂಬ ಪದವು ಮದುವೆಯ ವಯಸ್ಸಿಗೆ ಬಂದ ತರುಣ ಸ್ತ್ರೀಯನ್ನು ಉಲ್ಲೇಖಿಸುತ್ತದೆ. ಅನೇಕರು ಈಕೆಯನ್ನು ಯೆರೂಸಲೇಮಿನಲ್ಲಿ ವಾಸಿಸುತ್ತಿದ್ದ ಮದುವೆಯಾದ ಸ್ತ್ರೀ ಎಂದು ಭಾವಿಸುತ್ತಾರೆ. ಈಕೆಯು ಯೆಶಾಯನ ಹೆಂಡತಿ ಆಗಿರಬಹುದು. ಯೆಶಾಯ 8:3ನೇ ವಚನವು ಯೆಶಾಯನಿಗೆ ತನ್ನ ಹೆಂಡತಿಯಿಂದ ಹುಟ್ಟಿದ ಮಗುವಿನ ಬಗ್ಗೆ ದಾಖಲಿಸುತ್ತದೆ (ಇಲ್ಲಿ ಯೆಶಾಯನ ಹೆಂಡತಿಯನ್ನು ಪ್ರವಾದಿನಿಯೆಂದು ಭಾವಿಸಲಾಗಿದೆ. ಯಾಕೆಂದರೆ ಆಕೆಯಲ್ಲದಿದ್ದರೂ ಕನಿಷ್ಠ ಆಕೆಯ ಮಕ್ಕಳು ಪ್ರವಾದನೆಯ ಸಂದೇಶದ ಭಾಗವಾಗಿದ್ದಾರೆ, ಯೆಶಾಯ 7:3 ಮತ್ತು ಯೆಶಾಯ 8:18ನ್ನು ಹೋಲಿಸಿರಿ).

ಅದು ಏನೇ ಇರಲಿ, ಈ ಮಗುವಿಗೆ ಮಹೇರ್ ಶಾಲಾಲ್ ಹಾಷ್‌ಬಚ್ ಎಂಬ ಹೆಸರಿಡಲಾಯ್ತು (ಯೆಶಾಯ 8:1–4). ಆದರೆ ಇಮಾನುವೇಲ್ ಎಂಬುದಾಗಿ ಕರೆಯಲಿಲ್ಲ. ಆದಾಗ್ಯೂ ಈ ಎರಡು ಹುಡುಗರ ಹುಡುಗರಿಗೆ ಅನ್ವಯಿಸುವ ಗುರುತುಗಳು ಒಂದೇ ರೀತಿಯಾಗಿವೆ. ಆ ಹುಡುಗರು ಒಳ್ಳೇದು ಬೇಕು ಕೆಟ್ಟದ್ದು ಬೇಡ ಎಂದು ಹೇಳುವ ವಯಸ್ಸಿಗೆ ಬರುವುದರೊಳಗೆ ಸಿರಿಯ ಮತ್ತು ಉತ್ತರಪ್ರಾಂತ್ಯವಾದ ಇಸ್ರಾಯೇಲು ನಾಶವಾಗುವವು ಎಂಬುದು ಆ ಗುರುತು (ಯೆಶಾಯ 7:16, ಯೆಶಾಯ 8:4).

(2) ಕೆಲವರು ಆಹಾಜನ ಮಗನಾದ ಹಿಜ್ಕೀಯವನ್ನು ಇಮ್ಮಾನುವೇಲ್ ಎಂದು ಸೂಚಿಸುತ್ತಾರೆ. ಆದರೆ ಇಮ್ಮಾನುವೇಲ್ ಎಂಬ ಹೆಸರು ಹಿಜ್ಕೀಯನಿಗೆ ಎಲ್ಲೂ ಅನ್ವಯವಾಗುವುದಿಲ್ಲ.

(3) ಯಾಕೆಂದರೆ ಇಮ್ಮಾನುವೇಲ್ ಎಂಬುದರ ಅರ್ಥವು ನಿಗೂಢವಾಗಿ ಕಾಣುತ್ತದೆ. ಆತನ ಹೆಸರು ದೇವರ ಇರುವಿಕೆಯನ್ನು ಉಲ್ಲೇಖಿಸಲು ಸಲುವಾಗಿ "ದೇವರು ನಮ್ಮೊಂದಿಗಿದ್ದಾನೆ" ಎಂದು ಅನುವಾದಿಸಲಾಗಿದೆ. ಯೆಶಾಯ 9 ಮತ್ತು 11ನೇ ಅಧ್ಯಾಯಗಳು ವರದ ಮಗನು ಎಂದು ಹೇಳಿರುವ ಮಗು ಮತ್ತು ಇಮ್ಮಾನುವೇಲ್ ಎಂದು ಕರೆಸಿಕೊಳ್ಳುವ ಒಂದೇ ಆಗಿದೆ. ಹಾಗಿದ್ದ ಪಕ್ಷದಲ್ಲಿ, ದೆವ್ವ ಮಟ್ಟಕ್ಕೆ ಏರಿಸಲ್ಪಟ್ಟ ಆತನನ್ನು ಏರಿಸಲ್ಪಟ್ಟ ಮಟ್ಟವು ದೈವೀಕ

ಮಟ್ಟವಾಗಿದೆ (ಯೆಶಾಯ 9:6) ಮತ್ತು 'ಇಷಯನ ಅಂಕುರ' (ಯೆಶಾಯ 11:10) ಎಂಬುದು ಹಿಜ್ಕೀಯನಿಗೆ ಸಲ್ಲಲಾರದಷ್ಟು ಮೀರಿದ ಮಟ್ಟದ್ದಾಗಿದೆ.

(4) ವಯಸ್ಸಿಗೆ ಬಂದ ಸ್ತ್ರೀಯು ಮದುವೆಯಾಗದೆ ಹೆರುವುದು ಅನೈತಿಕವಾದ ಕೃತ್ಯವೆಂದು ಎಣಿಸಲ್ಪಡುತ್ತದೆ (ಧ.ಕಾಂಡ 22:20,21) ಅಂತಹ ಮಗುವನ್ನು ದೇವರು ನಂಬಿಕೆಯನ್ನು ಪ್ರೇರಿಸುವ ಗುರುತನ್ನಾಗಿ ಪರಿಗಣಿಸುತ್ತಾನೆ ಏಕೆ?

ಇದಕ್ಕೆ ವ್ಯತಿರಿಕ್ತವಾಗಿ ಹೊಸ ಒಡಂಬಡಿಕೆಯು ಯೇಸುಕ್ರಿಸ್ತನನ್ನು ಇಮ್ಮಾನುವೇಲ್ ಎಂಬುದಾಗಿ ಗುರುತಿಸುತ್ತದೆ (ಮತ್ತಾಯ 1:21–23). ಈತನು ಇನ್ನೂ ಮದುವೆಯಾಗಿಲ್ಲದ, ಮದುವೆಗೆ ನಿಶ್ಚಿತವಾಗಿರುವ ಒಬ್ಬ ಕನ್ಯೆಯಲ್ಲಿ ಜನಿಸಿ ಬಂದನು. ಹಾಗೆಯೇ ಯೇಸುಕ್ರಿಸ್ತನು ದೇವಪುತ್ರನೂ ಆಗಿದ್ದಾನೆ (ಯೆಶಾಯ 9:6 ಮತ್ತು ಮತ್ತಾಯ 3:17) ಮತ್ತು ಇಷಯನ ಬುಡದಿಂದ ಬಂದ ಚಿಗುರೂ (ಅಂಕುರ) ಇಷಯನ ಸಂತಾನದ ಬುಡವೂ (ಬೇರೂ) ಆಗಿದ್ದಾನೆ. (ಯೆಶಾಯ 11:1,10, ಪ್ರಕ 22:16). ಬಹುಶಃ ಇದಕ್ಕಿಂತ ಮುಂಚಿನ ಇಮ್ಮಾನುವೇಲನು ಮತ್ತು ಆತನ ಬೆಳವಣಿಕೆಯು ಅಹಾಜನಿಗೆ ಪ್ರವಾದನೆಯ ನೆರವೇರಿಕೆಯ ಉಚಿತವಾದ ಸಮಯವನ್ನು ಸಾಬೀತುಪಡಿಸುತ್ತದೆ, ಕ್ರಿಸ್ತನಿಗೆ ಮುಂದಾಗಿ ಓಡುವ ಓಟಗಾರನಾಗಿ ನಮಗೆ ಎಲ್ಲವೂ ಗೊತ್ತಿಲ್ಲದಿದ್ದರೂ ಗೊತ್ತಾಗಬೇಕಿರುವುದು ಏನೆಂದು ಗೊತ್ತಾಗಿದೆ. ಅದೇನೆಂದರೆ "ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿ ಬಂದನು" (ಗಲಾತ್ಯ 4:4) ಬಂದು ದೇವರ ಸಾನಿಧ್ಯವನ್ನು ನಮ್ಮ ಮಧ್ಯದಲ್ಲಿ ತಂದನು.

ಕ್ರಿಸ್ತನು ಮಾನವನಾಗಿ ಬರುವುದರ ವಾಸ್ತವಿಕತೆಯನ್ನು ಚೆನ್ನಾಗಿ ಚಿಂತನೆ ಮಾಡಿರಿ. ಭಯಭೀತಿಯಿರುವ ಯಾವುದನ್ನೂ ಲಕ್ಷಿಸದ ಭಾವಶೂನ್ಯವಾಗಿ ತೋರುವ ಈ ಪ್ರಪಂಚದಲ್ಲಿ ಇದು ನಮ್ಮನ್ನು ಯಾವ ರೀತಿಯಲ್ಲಿ ಸಂತೈಸುತ್ತದೆ?

**ಗುರುವಾರ** **ಜನವರಿ 14**

## "ದೇವರು ನಮ್ಮೊಂದಿಗಿದ್ದಾನೆ" (ಯೆಶಾಯ 7:14)

ಯೆಶಾಯನ ಮಕ್ಕಳ ಹೆಸರುಗಳಂತೆಯೇ ಇಮ್ಮಾನುವೇಲ್ ಎಂಬ ಹೆಸರಿಗೆ ಅರ್ಥವಿದೆ ಯೆಶಾಯನ ಮೊದಲ ಮಗನ ಹೆಸರು ಶೆಯಾರ್ ಯಶೂಬ

ಇದು ಜನಶೇಷವು ತಿರುಗಿಕೊಳ್ಳುವುದು ಎಂಬ ಅರ್ಥವುಳ್ಳದ್ದು ಹಾಗೆಯೇ ಅವನ ಎರಡನೇ ಮಗನ ಹೆಸರು ಮಹೇರ್ ಶಾಲಾಲ್ ಹಾಷ್ ಬಜ್ ಎಂಬುದಾಗಿ ಇದು ಸೂರೆಗೆ ಆತುರ ಕೊಳ್ಳೆಗೆ ಅವಸರ ಎಂಬ ಅರ್ಥವನ್ನು ಕೊಡುತ್ತದೆ. ಇಮ್ಮಾನುವೇಲ್ ಎಂಬ ವಾಚ್ಯಾರ್ಥ "ದೇವರು ನಮ್ಮೊಂದಿಗೆ" ಎಂದು ಆದರೆ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಪದ 'ನಮ್ಮ ಕೂಡ ದೇವರು' ಎಂಬುದು ಇದರಲ್ಲಿ ಬಹಳ ಮುಖ್ಯವಾದುದೊಂದು ತಪ್ಪಿಹೋಗುತ್ತಿದೆ. ಇಬ್ರಿಯ ಹೆಸರುಗಳಲ್ಲಿ ಕ್ರಿಯಾಪದಗಳು ಇರುವುದಿಲ್ಲ. ಹಾಗೆಯೇ ಇದರಲ್ಲೂ ಆಗಿದೆ. ಇದಕ್ಕೆ ಇದ್ದಾನೆ ಎಂಬುದನ್ನು ಸೇರಿಸಬೇಕು. ಆದುದರಿಂದ ಇಮ್ಮಾನುವೇಲ್ ಎಂಬುದು 'ದೇವರು ನಮ್ಮ ಕೂಡ ಇದ್ದಾನೆ' ಎಂದು ಭಾಶಾಂತರವಾಗಬೇಕು (ಯೆಶಾಯ 8:10 ಹೀಗೆಯೇ ಇದೆ ಇದನ್ನು ಹೋಲಿಸಿ ನೋಡಿರಿ). ಹಾಗೆಯೇ "ಯೇಸು" ಎಂಬ ಹೆಸರಿನ ಅರ್ಥ "ಕರ್ತನು ರಕ್ಷಣೆಯಾಗಿದ್ದಾನೆ" (ಯೆಶಾಯ ಎಂಬ ಪದವು 'ಯೆಹೋವನ ರಕ್ಷಣೆ' ಎಂಬ ಅರ್ಥಹೊಂದಿದೆ).

ಆದರೆ ಇಮ್ಮಾನುವೇಲ್ ಎಂಬ ಹೆಸರು ಕೇವಲ ಇಂದ್ರಿಯಾನುಭವಕ್ಕೆ ಬಾರದ ವಿವರಣೆಯಲ್ಲ. "ದೇವರು ನಮ್ಮ ಕೂಡ ಇದ್ದಾನೆ" ಎಂಬುದು ನೆರವೇರಿದ ವಾಗ್ದಾನವಾಗಿದ್ದು ಖಂಡಿತವಾದ ಮಾತಾಗಿದೆ (ನುಡಿಯಾಗಿದೆ).

ದೇವರು ನಮ್ಮ ಕೂಡ ಇದ್ದಾನೆ ಎಂಬ ವಾಗ್ದಾನದ ಮಹತ್ವವೇನು?

ಬಲಯುತವಾದ ಭರವಸೆ ಮತ್ತು ಆದರಣೆ ಎಂಬುದಿಲ್ಲ. ತನ್ನ ಜನರು ಕಷ್ಟಗಳನ್ನು ನೋವುಗಳನ್ನು ಸಹಿಸಲಾರರು ಎಂಬುದಾಗಿ ದೇವರು ಹೇಳುವುದಿಲ್ಲ, ಆದರೆ ಆತನು ಅಂತಹ ಸಂದರ್ಭದಲ್ಲಿ ಅವರೊಡನೆ ಇರುತ್ತಾನೆಂದು ವಾಗ್ದಾನ ಮಾಡಿದ್ದಾನೆ. ಕೀರ್ತನೆಗಾರನು ಹೀಗೆ ಹೇಳುತ್ತಾನೆ: "ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವುದರಿಂದ ನಾನು ಕೇಡಿಗೆ ಹೆದರೆನು. ನಿನ್ನ ಕೋಲೂ ದೊಣ್ಣೆಯೂ ನನಗೆ ಧೈರ್ಯಕೊಡುತ್ತವೆ" (ಕೀರ್ತನೆ 23:4).

ದೇವರು ಹೀಗೆ ಹೇಳುತ್ತಾನೆ: ನೀನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡವಿರುವೆನು; ನದಿಗಳನ್ನು ದಾಟುವಾಗ ಅವು ನಿನ್ನನ್ನು

ಮುಣಗಿಸವು; ಉರಿಯಲ್ಲಿ ನಡೆಯುವಾಗ ನೀನು ಕಂದದಿರುವಿ, ಜ್ವಾಲೆಯು ನಿನ್ನನ್ನು ದಹಿಸದು (ಯೆಶಾಯ 43:2).

ಬ್ಯಾಬಿಲೋನಿಯರು ದಾನಿಯೇಲನ ಮೂವರು ಸ್ನೇಹಿತರನ್ನು ಉರಿಯುವ ಆವಿಗೆಗೆ ಹಾಕಿದಾಗ ದೇವರು ಎಲ್ಲಿದ್ದನು? ಅವರ ಜೊತೆಯಲ್ಲಿ (ದಾನಿಯೇಲ 3:23–25). ಯಾಕೋಬನ ಸಂಕಟ ಕಾಲದಲ್ಲಿ ಆತನು ಬೆಳಗಾಗುವವರೆಗೆ ಹೋರಾಟ ಮಾಡುವಾಗ ದೇವರು ಎಲ್ಲಿದ್ದನು? ಯಾಕೋಬನ ತೋಳುಗಳ ಮಧ್ಯದಲ್ಲಿ, ಸಾಧ್ಯವಾದಷ್ಟು ಹತ್ತಿರದಲ್ಲಿಯೇ ಇದ್ದನು (ಆದಿಕಾಂಡ 32:24–30).

ದೇವರು ದೈಹಿಕವಾಗಿ ಭೂಮಿಯ ಮೇಲೆ ಕಾಣಿಸಿಕೊಳ್ಳದಿದ್ದರೂ ಆತನ ಜನರ ಕಷ್ಟ ಸಂಕಟಾನುಭವಗಳಲ್ಲಿ ಅವರ ಜೊತೆಯಾಗಿರುತ್ತಾನೆ. ಸ್ತೆಫನನನ್ನು ಜನರು ಕೊಲ್ಲುವುದಕ್ಕೆ ಮುತ್ತಿಕೊಂಡಾಗ ದೇವರು ಎಲ್ಲಿದ್ದನು? ದೇವರ ಬಲಗಡೆ ನಿಂತಿದ್ದನು (ಅ.ಕೃ 7:55). ಆದರೆ ಯೇಸುವು ಪರಲೋಕಕ್ಕೆ ಏರಿ ಹೋದಾಗ ದೇವರ ಬಲಗಡೆಯಲ್ಲಿ ಆಸನಾರೂಢನಾದನು (ಇಬ್ರಿಯ 1:3). ಸ್ತೆಫನನು ಕಷ್ಟಕ್ಕೀಡಾದಾಗ, ಜನರು ಕಲ್ಲೆಸೆದು ಕೊಲ್ಲುವಾಗ ಯೇಸುಕ್ರಿಸ್ತನು ದೇವರ ಬಲಗಡೆ ನಿಂತಿದ್ದನು? "ಯೇಸುಕ್ರಿಸ್ತನು ಆವಾಗ ಕುಳಿತುಕೊಂಡಿರಲಾರನು" ಎಂದು ಮೇರಿಸ್ ವೆಂಡನ್ ಹೇಳುತ್ತಾರೆ: Review and Herald, 1996 publication, pp 66.

ದೇವರು ನಮ್ಮ ಕೂಡ ಇದ್ದಾನೆಂಬ ವಾಗ್ದಾನವು ಇದ್ದಾಗ್ಯೂ ನಾವು ಭಯಂಕರವಾದ ಶೋಧನೆಗಳು ಮತ್ತು ಕಷ್ಟಸಂಕಟಗಳಲ್ಲಿ ಸಿಲುಕಿರುವಾಗ ಇದು ಯಾವ ವ್ಯತ್ಯಾಸವನ್ನು ಕೊಡುತ್ತದೆ? ಆತನ ಇರುವಿಕೆಯ ಅರಿವು ಇರುವಾಗ ಅದು ನಮಗೆ ಏನು ಒಳ್ಳೆಯದನ್ನು ಮಾಡುತ್ತದೆ? ನಿಮ್ಮ ಉತ್ತರವನ್ನು ವಿವರಿಸಿರಿ?

**ಶುಕ್ರವಾರ** **ಜನವರಿ 15**

**ಹೆಚ್ಚಿನ ಚಿಂತನೆಗಾಗಿ:** ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು.... ದೇವರು ನಮ್ಮ ಕೂಡ ಇದ್ದಾನೆ. ಈತನ ಮುಖದಲ್ಲಿ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ತೋರಿಬರುತ್ತದೆ. ಅನಾದಿ ಕಾಲದಿಂದಲೂ ಕರ್ತನಾದ ಯೇಸುಕ್ರಿಸ್ತನು

ತಂದೆಯಲ್ಲಿ ಒಂದಾಗಿದ್ದನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ. ದೇವರ ಮಹಿಮೆಯನ್ನು ಲೋಕಕ್ಕೆ ಪ್ರಕಟಿಸಲು (ತೋರಿಸಲು) ಭೂಮಿಗೆ ಬಂದನು. ಪಾಪಾಂಧಕಾರದಲ್ಲಿ ಮುಳುಗಿ ಹೋದ ಭೂಮಿಗೆ ದೇವರ ಪ್ರೀತಿಯ ಬೆಳಕನ್ನು ತೋರಿಸಿಕೊಡಲು, ದೇವರು ನಮ್ಮ ಕೂಡ ಇರುವಂತಾಗಲು ಬಂದನು ಆದುದರಿಂದ ಪ್ರವಾದನೆ ನುಡಿದುದೇನೆಂದರೆ ಆತನಿಗೆ "ಇಮ್ಮಾನುವೇಲ್" ಎಂದು ಹೆಸರಿಡುವರು – ಎಲೆನ್ ಜಿ ವೈಟ್ ಪ್ರವಾದಿಗಳು ಮತ್ತು ಅರಸರು" ಪುಸ್ತಕದಲ್ಲಿ 329ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ನೀವು ಯಾವುದಾದರೂ ನಿರ್ಧಾರ ತೆಗೆದುಕೊಳ್ಳಬೇಕಾದಾಗ ದೇವರಿಗೆ ಒಂದು ಗುರುತುಕೊಡೆಂದು ಕೇಳುವುದು ಸರಿಯೇ? ಎಂತಹ ಅಪಾಯಗಳು ಅದರಿಂದ ಬರುವ ಸಾಧ್ಯತೆಗಳಿವೆ?
2. ಮನುಷ್ಯರ ಸಹಕಾರ ಸಹಾಯ ಪಡೆದುಕೊಳ್ಳುವುದು ಸರಿ ಆದರೆ ಅದರ ಪರಿಮಿತಿಯನ್ನು ಗುರುತಿಸುವುದು ಹೇಗೆ?
3. ರಷ್ಯಾದ ಸಾಹಿತಿಯಾದ ಲಿಯೋಟಾಲ್‌ಸ್ಟಾಯಿಯವರು ಒಮ್ಮೆ ತಮ್ಮ ಸ್ನೇಹಿತರಿಗೆ ಹೀಗೆ ಬರೆದರು ಒಂದು ವೇಳೆ ಮನುಷ್ಯನು ಮರಣವು ಎಲ್ಲದರ ಅಂತ್ಯವೆಂದು ಅರಿತುಕೊಂಡರೆ ನಂತರ ಜೀವನದಷ್ಟು ಕೆಟ್ಟದ್ದು ಬೇರೆ ಯಾವುದೂ ಇರುವುದಿಲ್ಲ. ದೇವರು ನಮ್ಮ ಕೂಡ ಇದ್ದಾನೆಯೆಂಬ ಅರಿವು ಅಂತಹ ಹೇಳಿಕೆಗೆ ಹೇಗೆ ಉತ್ತರ ಕೊಡುತ್ತದೆ?

**ಸಾರಾಂಶ:** ದೇವರು ನಂಬಿಕೆಯಿಲ್ಲದ ರಾಜನಾದ ಆಹಾಜನನ್ನು ಒಂದು ಕಷ್ಟಕರವಾದ ನಿರ್ಧಾರ ತೆಗೆದುಕೊಳ್ಳಬೇಕಾದ ಪರಿಸ್ಥಿತಿಗೆ ತಂದನು: ನಂಬಬೇಕು ಅಥವಾ ನಂಬದಿರಬೇಕು ಎಂಬುದನ್ನೇ ನಿರ್ಧರಿಸಬೇಕಾಗಿತ್ತು. ಆತನು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವಂತಹ ಯಾವುದೇ ಗುರುತನ್ನು ಕೇಳುವುದಕ್ಕೆ ದೇವರು ಅವನಿಗೆ ಅವಕಾಶಕೊಟ್ಟನು. ಆದರೆ ಯಾಕೆ ನಂಬಬೇಕು ಎಂಬುದನ್ನು ಮಾಡಿ ತೋರಿಸುವುದಕ್ಕೆ ಆತನು ದೇವರಿಗೆ ಅವಕಾಶ ಕೊಡಲು ಸಮ್ಮತಿಸಲಿಲ್ಲ. ಅದಕ್ಕೆ ಬದಲಾಗಿ ಆತನು ಅಶ್ಯೂರದ ರಾಜನನ್ನು ಮಿತ್ರನನ್ನಾಗಿ ಆರಿಸಿಕೊಂಡನು.